ಎಂ.ವಿ.ಸಿ.457/2024, ಪಿ.ಡಬ್ಲೂ-1 ಹೆಸರುಃ ಮಧುಕರಾನಂದ

**ದಿಃ06-08-2025 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲು : 2 ನೇ ಎದುರುದಾರರ ಪರ ಶ್ರೀ ಪಿ.ಎನ್. ವಕೀಲರಿಂದಃ**

ಅಪಘಾತ ಏರ್ಪಟ್ಟಾಗ ನಾನು ಬೈಕಿನ ಹಿಂಬದಿಯಲ್ಲಿ ಕುಳಿತಿದ್ದೆನು. ಬೈಕನ್ನು ನನ್ನ ಸಂಬಂಧಿಕರಾದ ಅಣ್ಣಯ್ಯರವರು ಚಾಲನೆ ಮಾಡುತ್ತಿದ್ದರು. ಬೈಕಿನಲ್ಲಿ ನಾನು ಮತ್ತು ಅಣ್ಣಯ್ಯರವರು ಹೋಗುತ್ತಿದ್ದೆವು. ಅಪಘಾತ ಏರ್ಪಟ್ಟ ಸಮಯದಲ್ಲಿ ನಾವು ಶಿವನಿಯಿಂದ ಶಿವನಿ ರೈಲ್ವೆ ನಿಲ್ದಾಣಕ್ಕೆ ಹೋಗುತ್ತಿದ್ದೆವು. ಸದರಿ ಬೈಕು ಮಂಜುನಾಥ ಎಂಬುವವರಿಗೆ ಸೇರಿದ್ದು, ಅಣ್ಣಯ್ಯರವರು ಸದರಿ ಬೈಕನ್ನು ತೆಗೆದುಕೊಂಡು ಬಂದಿದ್ದರು. ಅಣ್ಣಯ್ಯರವರು ಬೈಕನ್ನು ಅತೀ ವೇಗವಾಗಿ ಚಾಲನೆ ಮಾಡಿಕೊಂಡುಹೋಗಿ ರಸ್ತೆಯ ಪಕ್ಕದಲ್ಲಿದ್ದ ಮಣ್ಣಿನ ಗುಡ್ಡೆಯ ಮೇಲೆ ಬೀಳಿಸಿದರು. ಅಪಘಾತ ಏರ್ಪಟ್ಟ ರಸ್ತೆ ಶಿವನಿ ರೈಲ್ವೆ ನಿಲ್ದಾಣದ ರಸ್ತೆ ಆಗಿರುತ್ತದೆ.

2. ಅಪಘಾತದ ನಂತರ ನನ್ನನ್ನು ಹೊಸದುರ್ಗದ ಶ್ರೇಯ ಆರ್ಥೋ ಕ್ಲೀನಿಕ್‌ಗೆ ಹೋಗಿದ್ದು, ನಂತರ ಶಿವಮೊಗ್ಗದ ಆರಾಧನ ಆರ್ಥೋಪೆಡಿಕ್ ಸೆಂಟರ್‌ಗೆ ಕಳುಹಿಸಿರುತ್ತಾರೆ. ಅಪಘಾತದಲ್ಲಿ ಅಣ್ಣಯ್ಯರವರಿಗೂ ಸಹ ಪೆಟ್ಟಾಗಿತ್ತು. ಅಪಘಾತದ ಸ್ಥಳದಿಂದ ಶಿವನಿ ಸರ್ಕಾರಿ ಆಸ್ಪತ್ರೆ ಹತ್ತಿರ ಇದೆ. ಅಪಘಾತದ ಸ್ಥಳದಿಂದ ಶಿವನಿ ಸರ್ಕಾರಿ ಆಸ್ಪತ್ರೆಗೆ 3 ಕಿ.ಮೀ. ಇದೆ. ಅಪಘಾತದ ನಂತರ ನನ್ನನ್ನು ಹೊಸದುರ್ಗದ ಶ್ರೇಯ ಆಸ್ಪತ್ರೆಗೆ ನನ್ನ ಅಣ್ಣ ಕರೆದುಕೊಂಡು ಹೋಗಿರುತ್ತಾರೆ. ಅಣ್ಣಯ್ಯರವರನ್ನು ಸಹ ಹೊಸದುರ್ಗದ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಶಿವನಿಯಿಂದ ಹೊಸದುರ್ಗ 22 ಕಿ.ಮೀ. ಇದೆ. ಶ್ರೇಯ ಆಸ್ಪತ್ರೆಯಲ್ಲಿ ಡಾ. ಸಂಜಯ್‌ರವರು ನನಗೆ ಚಿಕಿತ್ಸೆ ನೀಡಿರುತ್ತಾರೆ. ಶ್ರೇಯ ಆಸ್ಪತ್ರೆ ಹೊಸದರ್ಗುದ ಹೊಳಲ್ಕೆರೆ ರಸ್ತೆಯಲ್ಲಿ ಇದೆ. ಶಿವನಿಯಿಂದ ಶ್ರೇಯ ಆಸ್ಪತ್ರೆಗೆ ಹೋಗಲು ಹೊಸದುರ್ಗದ ಸರ್ಕಾರಿ ಆಸ್ಪತ್ರೆಯ ಮುಂಬಾಗವೇ ಹೋಬೇಕು ಎಂದರೆ ಸರಿ. ನಾನು ಅಪಘಾತದ ನಂತರ ಯಾವುದೇ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆಯನ್ನು ಪಡೆದಿಲ್ಲ. ನನಗೆ ಮತ್ತು ಅಣ್ಣಯ್ಯರವರಿಗೆ ಪ್ರಜ್ಞೆ ತಪ್ಪಿರಲಿಲ್ಲ. ಶ್ರೇಯ ಆಸ್ಪತ್ರೆಗೆ ಸಂಜೆ 4.30 ಕ್ಕೆ ಹೋಗಿದ್ದು, ಒಂದು ಗಂಟೆ ಕಾಲ ಇದ್ದೆನು. ಶ್ರೇಯ ಆಸ್ಪತ್ರೆಯಿಂದ ನಂತರ ಶಿವಮೊಗ್ಗದ ಆರಾಧನ ಆಸ್ಪತ್ರೆಗೆ ಹೋಗಿರುತ್ತೇನೆ. ಆರಾಧನ ಆಸ್ಪತ್ರೆಗೆ ಹೋದಾಗ ರಾತ್ರಿ 10 ಗಂಟೆ ಆಗಿತ್ತು.

3. ಆರಾಧನ ಆಸ್ಪತ್ರೆಯಲ್ಲಿ ಒಂದು ವಾರ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೆನು. ನಾನು ಶ್ರೇಯ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಪಡೆದ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಆರಾಧನ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿದ ವೈದ್ಯರ ಹೆಸರು ಗೊತ್ತಿಲ್ಲ. ಆರಾಧನ ಆಸ್ಪತ್ರೆಯಲ್ಲಿ ಆಪರೇಷನ್ ಮಾಡಿರುತ್ತಾರೆ. ಆಪರೇಷನ್ ಆದ ನಂತರದಲ್ಲಿ 20 ದಿನಗಳಿಗೊಮ್ಮೆ ಒಂದು ಭಾರಿ, ನಂತರ ಎರಡು ತಿಂಗಳಿಗೊಮ್ಮೆ ಒಂದು ಭಾರಿ ಹೋಗಿದ್ದೆನು. ನಾನು ಆರಾಧನ ಆಸ್ಪತ್ರೆಗೆ ಜೂನ್ 2024 ರಲ್ಲಿ ಕಡೆಯ ಭಾರಿ ಚಿಕಿತ್ಸೆಗಾಗಿ ಹೋಗಿದ್ದೆನು. ನನ್ನ ಕೈಗೆ ರಾಡನ್ನು ಮತ್ತು ಪ್ಲೇಟನ್ನು ಹಾಕಿರುತ್ತಾರೆ. ನನ್ನ ಕೈಗೆ ಹಾಕಿರುವ ರಾಡನ್ನು ಮತ್ತು ಪ್ಲೇಟನ್ನು ಆರಾಧನ ಆಸ್ಪತ್ರೆಯಲ್ಲಿಯೇ ತೆಗಿಸಬೇಕು ಎಂದರೆ ಸರಿ. ಆರಾಧನ ಆಸ್ಪತ್ರೆಯಲ್ಲಿ ನನಗೆ ಡಾ. ಮಂಜುನಾಥ್‌ರವರು ಚಿಕಿತ್ಸೆ ನೀಡಿರುತ್ತಾರೆ. ಮೂರು ವರ್ಷದ ನಂತರ ನನ್ನ ಕೈಗೆ ಅಳವಡಿಸಿರುವ ರಾಡನ್ನು ಮತ್ತು ಪ್ಲೇಟನ್ನು ತೆಗೆಯಬೇಕು ಎಂದು ಆರಾಧನ ಆಸ್ಪತ್ರೆಯ ವೈದ್ಯರು ಹೇಳಿರುತ್ತಾರೆ. ಆರಾಧನ ಆಸ್ಪತ್ರೆಯ ವೈದ್ಯರು ಮುಂದಿನ ಚಿಕಿತ್ಸೆಯ ಅಗತ್ಯತೆ ಇಲ್ಲ ಎಂದು ಹಾಗೂ ಗುಣಮುಖವಾಗಿದಿಯ ಎಂದು ಹೇಳಿದ್ದರಿಂದ ನಾನು ಪುನಃ ಚಿಕಿತ್ಸೆಗೆ ಹೋಗಿಲ್ಲ. ನಾನು ಹೊಳಲ್ಕೆರೆಯ ಎಸ್.ಬಿ.ಎಂ. ಕ್ಲೀನಿಕ್‌ನ ಡಾ. ಮಂಜುನಾಥ್‌ರವರ ಬಳಿ ಚಿಕಿತ್ಸೆ ಪಡೆದಿದ್ದೇನೆ. ನಾನು ಡಾ. ಮಂಜುನಾಥ್‌ರವರ ಬಳಿ ಈ ವರ್ಷದ ಮಾರ್ಚ್ ಮತ್ತು ಏಪ್ರಿಲ್ ತಿಂಗಳಿನಲ್ಲಿ ಎರಡುಭಾರಿ ಚಿಕಿತ್ಸೆಗಾಗಿ ಹೋಗಿದ್ದೆನು. ಡಾ. ಮಂಜುನಾಥ್‌ರವರು ಹೊಳಲ್ಕೆರೆಯ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯರಾಗಿರುತ್ತಾರೆ ಎಂದರೆ ಸರಿ. ಕ್ಷ ಕಿರಣವನ್ನು ಸರ್ಕಾರಿ ಆಸ್ಪತ್ರೆಯಲ್ಲಿಯೇ ತೆಗೆದಿರುತ್ತಾರೆ. ಅಂಗನ್ಯೂನ್ಯತೆಯ ಪ್ರಮಾಣ ಪತ್ರವನ್ನು ಪಡೆಯುವ ಸಲುವಾಗಿ ನಾನು ಎಸ್.ಬಿ.ಎಂ. ಕ್ಲೀನಿಕ್‌ಗೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಆರಾಧನ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿದಂತಹ ವೈದ್ಯರು ಈಗಲೂ ಸಹ ಅದೇ ಆಸ್ಪತ್ರೆಯಲ್ಲಿ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆರಾಧನ ಆಸ್ಪತ್ರೆಯ ವೈದ್ಯರ ಬಳಿ ಅಂಗನ್ಯೂನ್ಯತಾ ಪ್ರಮಾಣ ಪತ್ರವನ್ನು ಪಡೆದುಕೊಂಡು ಬರಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ನನಗೆ ಯಾವುದೇ ಅಂಗನ್ಯೂನ್ಯತೆ ಉಂಟಾಗದಿದ್ದಾಗ್ಯೂ ಸಹ, ಡಾ. ಮಂಜುನಾಥ್‌ರವರ ಖಾಸಗಿ ಕ್ಲೀನಿಕ್‌ಗೆ ಹೋಗಿ ಸುಳ್ಳು ಅಂಗನ್ಯೂನ್ಯತೆಯ ಪ್ರಮಾಣ ಪತ್ರವನ್ನು ಮತ್ತು ಸುಳ್ಳು ವೈದ್ಯಕೀಯ ಬಿಲ್ಲುಗಳನ್ನು ಪಡೆದುಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ. ಡಾ. ಮಂಜುನಾಥ್‌ರವರು ಅಂಗನ್ಯೂನ್ಯತೆಯ ಪ್ರಮಾಣ ಪತ್ರವನ್ನು ಮಾತ್ರ ನೀಡಿದ್ದು, ಯಾವುದೇ ಚಿಕಿತ್ಸೆಯನ್ನು ನೀಡಿಲ್ಲ ಎಂದರೆ ಸರಿ.

4. ನಾನು ಅಪಘಾತದ ಪೂರ್ವದಲ್ಲಿ ಇದ್ದ ರೀತಿಯಲ್ಲಿಯೇ ಈಗಲೂ ಸಹ ಇದ್ದೇನೆ ಎಂದರೆ ಸರಿಯಲ್ಲ. ನಾನು ಆರಾಧನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಸಮಯದಲ್ಲಿ ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿಲ್ಲ. ಹೊಸದುರ್ಗದ ಶ್ರೇಯ ಆಸ್ಪತ್ರೆಯಲ್ಲಿ

ಚಿಕಿತ್ಸೆ ಪಡೆಯುತ್ತಿದ್ದಾಗಲೂ ಸಹ ವೈದ್ಯರು ನನ್ನ ಹೇಳಿಕೆಯನ್ನು ಪಡೆದುಕೊಂಡಿಲ್ಲ. ನಾನೇ ಬೈಕನ್ನು ಚಾಲನೆ ಮಾಡಿಕೊಂಡು ಹೋಗಿ ಬಿದ್ದು, ಗಾಯ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತದ ಮೂರು ದಿನಗಳ ನಂತರ ನನ್ನ ತಂದೆ ಪೊಲೀಸ್ ಠಾಣೆಗೆ ದೂರನ್ನು ನೀಡಿರುತ್ತಾರೆ ಎಂದರೆ ಸರಿ. ಅಪಘಾತವು ನನ್ನ ತಪ್ಪಿನಿಂದಲೇ ಉಂಟಾಗಿದ್ದು, ಆದಾಗ್ಯೂ ನನ್ನ ತಂದೆ ಪೊಲೀಸರೊಂದಿಗೆ ಷರೀಕಾಗಿ ಸುಳ್ಳು ದೂರನ್ನು ದಾಖಲಿಸಿ, ಅಪಘಾತದ ಕುರಿತು ಬೈಕಿನ ಬಗ್ಗೆ ಮತ್ತು ಮಾಲೀಕರ ಬಗ್ಗೆ ಸೃಷ್ಟಿಸಿಕೊಂಡು ಸುಳ್ಳು ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಮಾಸಿಕ ರೂ.50,000/- ಆದಾಯ ಪಡೆಯುತ್ತಿರುವ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಚಿಕಿತ್ಸೆಗಾಗಿ ರೂ.3,00,000/- ಖರ್ಚು ಮಾಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಸಲುವಾಗಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿಕೊಂಡು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ